MYSORE LEGISLATIVE ASSEMBLY.

FORTY-FIFTH DAY.

Friday, 7th September 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

PublicWorks Department Contractors in Kanakapura Taluk.

*Q.—6. Sri S. KARIAPPA (Kanakapura).—

Will the Government be pleased to state :—

(*a*) the number of Public Works Department contractors in Kanakapura Taluk ;

(*b*) the names of works they have been entrusted with ;

(*c*) the number of contractors to whom the bills have not been prepared for the work that have been executed for the past (1) one year, (2) six months, (3) three months ;

(*d*) the number of contractors, the works of whom have been measured and entered into the Measurement Book but (1) the bills have not been prepared, (2) bills prepared but not passed ?

A.—Sri VEERENDRA PATIL (Minister for Public Works).—

(*a*) 113.

(*b*), (*c*) and (*d*) These are furnished in a statement a copy of which is placed on the Table of the House.

[Placed in the Mysore Legislature Library *Vide* No. 71/LA—1962]

ಶ್ರೀ ಎಸ್. ಕರಿಯಪ್ಪ.—ತಾವು ಕೊಟ್ಟಿರತಕ್ಕ ತಃಖ್ತೆಯ 9ನೇ ಕಾಲಂ ನೋಡಿದರೆ ಅದರಲ್ಲಿ ಕೆಲವು ಕಡೆ work is not under progress ಮತ್ತು work is not in progress ಎಂದು ಹೇಳಿದೆ. ಸರ್ಕಾರದವರು ದುಡ್ಡು ಕೊಡದೇಹೋದರೆ ಆ ಕೆಲಸ ಹೇಗೆ ಪ್ರೊಗ್ರೆಸ್ ಆಗುತ್ತದೆ ?

†ಶ್ರೀ ವೀರೇಂದ್ರ ಪಾಟೀಲ್.—ಯಾವ ಕೆಲಸ ಮತ್ತು ಯಾವ ಕಂಟ್ರಾಕ್ಟರದು ?

ಶ್ರೀ ಎಸ್. ಕರಿಯಪ್ಪ.—ಪಟ್ಟಿಯ 9ನೇ ಕಾಲಂ ನೋಡಿ.

Mr. SPEAKER.—He wants to know whether the work is stopped on account of paucity of funds.

Sri VEERENDRA PATIL.—Not only paucity of funds but there are other factors also which are responsible.

ಶ್ರೀ ಎಸ್. ಕರಿಯಪ್ಪ.—ಈಗ ಕೆಲವು ಕೆಂಟ್ರಾಕ್ಟರ್ಸ್ ಕೆಲಸ ಮುಗಿಸಿದ್ದರೂ ಸರ್ಕಾರದವರು ಅವರಿಗೆ ದುಡ್ಡನ್ನು ಪಾವತಿಮಾಡದೆ ತಾಲ್ಲೂಕಿನಲ್ಲಿ ಅನೇಕ ಕಂಟ್ರಾಕ್ಟರುದಾರರಿಗೆ ಬಹಳ ತೊಂದರೆಯಾಗಿದೆ ಎಂಬುದಾಗಿ ಸರ್ಕಾರಕ್ಕೂ ಚೀಫ್ ಇಂಜನಿಯರುಗಳಿಗೂ ಅರ್ಜಿಗಳನ್ನು ಹಾಕಿಲ್ಲವೇ ? ಆ ರೀತಿ ಅರ್ಜಿಗಳನ್ನು ಹಾಕಿದ್ದರೂ ಸರ್ಕಾರದವರು ಅವರಿಗೆ ದುಡ್ಡನ್ನು ಕೊಡದೆ ಸುಮ್ಮನೆ ಸತಾಯಿಸುತ್ತಿದ್ದಾರೆಂಬುದಾಗಿ ನಾವು ಊಹೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಹಾಗೆಲ್ಲಾ ಊಹೆ ಮಾಡುವ ಪ್ರಶ್ನೆಯಲ್ಲ. ಆ ರೀತಿ ದುಡ್ಡು ಕೊಡಲಿಕ್ಕೆ ತಡವಾಗಿರುವುದಕ್ಕೆ ಬೇರೆ ಏನೇನೋ ಕಾರಣಗಳು ಇರುತ್ತವೆಂದು ಹೇಳಿದ್ದಾಗಿದೆ. ಒಟ್ಟು ಕಂಟ್ರಾಕ್ಟರುಗಳು ಇರುವುದು ಕೇವಲ 113. ಎಲ್ಲರಿಗೂ ಆರೀತಿ ತೊಂದರೆಯಾಗಿಲ್ಲ. ಕಷ್ಟ ಬಂದಿರುವುದು ಕೇವಲ 11 ಜನರಿಗೆ ಮಾತ್ರ. ಅವರು ಅಧಿಕಾರಿಗಳು ಹೇಳಿದಂತೆ ಕೆಲಸ ಮಾಡದೇ ಇರುವುದರಿಂದ ದುಡ್ಡು ಕೊಡಲಕ್ಕಾಗಲಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಪ್ರಶ್ನೆಯನ್ನು ಕಳುಹಿಸಿರುವುದು 6-3-1962ರಲ್ಲಿ; ಉತ್ತರ ಕೊಟ್ಟಿರುವುದು 24-7-62ರಲ್ಲಿ. ಅಲ್ಲಿಗೆ ಸುಮಾರು 5 ತಿಂಗಳು ಕಾಲ ಹೀಗೆ ಸತಾಯಿಸಿ, ಸತಾಯಿಸಿ ದುಡ್ಡನ್ನು ಅವರಿಗೆ ಕೊಡಬೇಕಾದರೆ ಅಲ್ಲಿ ಏನೋ ಇಂದಿದೆ ಎಂದು ನಾವು ಊಹೆ ಮಾಡುವುದಕ್ಕಾಗುವುದಿಲ್ಲವೇ ?

† Indicates that the remarks or speeches have not been revised by the member concerned.

ಶ್ರೀ ವೀರೇಂದ್ರಪಾಟೀಲ್.—ಅಲ್ಲ ಏನೊಂದೂ ಇಲ್ಲ. ಫೈನಲ್ ಬಿಲ್ ಕೊಡುವುದಕ್ಕೆ ಮೊದಲೇ ಅಧಿಕಾರಿಗಳು ಕಾನೂನಿಗನುಸಾರವಾಗಿ ಕೆಲಸ ಗಳೆಲ್ಲವೂ ತೃಪ್ತಿಕರವಾಗಿ ಮುಗಿದಿದೆಯೇ ಇಲ್ಲವೇ ಎಂಬುದನ್ನು ನೋಡದೆ ದುಡ್ಡು ಕೊಡುವುದಿಲ್ಲ. ಬಿಲ್ಲನ್ನು ರೆಕ್ಟಿಫೈ ಮಾಡದೆಯೇ ದುಡ್ಡು ಕೊಡಿ ಎಂದು ಕೇಳುವುದಕ್ಕಾಗುವುದಿಲ್ಲ. ಬಿಲ್ ಮತ್ತು ದುಡ್ಡಿನರೆಕ್ಟಿಫಿಕೇಷ್ ಆದತಕ್ಷಣವೇ ಬಿಲ್ಲನ್ನು ತಯಾರುಮಾಡಿ ಮತ್ತು ಪಾಸ್‌ಮಾಡಿ ದುಡ್ಡನ್ನು ಕೊಡಬೇಕಾಗಿಬರುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಫಂಡ್ಸ್‌ನಿಂದ ಕೊಡುವುದಕ್ಕೆ ಇನ್ನೂ ಅನೇಕ ಕಾರಣಗಳಿವೆ ಎಂದು ಹೇಳಿದಿರಿ. ಆ ಕಾರಣಗಳು ಯಾವುವು ?

ಶ್ರೀ ವೀರೇಂದ್ರ ಪಾಟೀಲ್.—Other reasons ಅಂದರೆ ಅಧಿಕಾರಿಗಳು ಕಂಟ್ರಾಕ್ಟುದಾರರಿಗೆ ಕೆಲವಾರು ನೂಚನೆಗಳನ್ನು ಕೊಟ್ಟಿರುತ್ತಾರೆ. ಅವನ್ನು carry out ಮಾಡದೆ ಹೋದರೆ ಫಂಡ್ಸ್ ನಿಂದ ದುಡ್ಡನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಕಂಟ್ರಾಕ್ಟುದಾರರು ಕೆಲಸ ಮಾಡಿದ್ದರೂ ಕೂಡ ಫಂಡ್ಸ್‌ಇಲ್ಲವೆಂದು ಹೇಳಿ ಅವರಿಗೆ ದುಡ್ಡು ಕೊಡದೇ ಹೀಗೆ ತಡ ಮಾಡುವುದು ನ್ಯಾಯವೇ ?

ಶ್ರೀ ವೀರೇಂದ್ರ ಪಾಟೀಲ್.— ಆ ರೀತಿ ಎಲ್ಲದರಲ್ಲೂ ನಿಧಾನವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ರೂರಲ್ ಕಮ್ಯೂನಿಕೇಷನ್ಸ್ ಬಗ್ಗೆ ಹೇಳುವುದಾದರೆ ಎಷ್ಟೋವೇಳೆ ಅವನ್ನು ತಗೆದುಕೊಳ್ಳುವಾಗ ವಿಶೇಷವಾಗಿ ಫಂಡ್ಸ್ ಇರುವುದಿಲ್ಲ, ಆದ್ದರಿಂದ ಇದು ಸ್ವಲ್ಪ ತಡವಾಗಿದೆ. ಅಷ್ಟೇಹೊರತು ಇನ್ನೇನೂ ಆಗಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಿ. ಡಬ್ಲ್ಯು. ಡಿ. ರೂರಲ್ ಕಮ್ಯೂನಿಕೇಷನ್ಸ್ ಕೆಲಸ ಕಾರ್ಯಗಳಲ್ಲೂ ಮತ್ತು ಕೆರೆದಳ ಕಾಮಗಾರಿಗಳಲ್ಲೂ ಫಂಡ್ಸ್ ಇಲ್ಲವೆಂದು ಒಂದು ಸರ್ಕ್ಯುಲರನ್ನು ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—The Hon'ble Member wants to know whether any circular has been issued in respect of works other than Rural Communications Works.

Sri VEERENDRA PATIL.—In respect of works for which there is no paucity of funds, they are in progress. But there may be a little delay.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—Little delay ಎಂದು ಹೇಳಿದಿರಿ. ಈಗಾಗಲೇ 6 ತಿಂಗಳು ಗಳಾದುವು. ದಯವಿಟ್ಟು ಸರಿಯಾಗಿ ನೋಡಿ ಹೇಳ ಬೇಕು.

ಶ್ರೀ ವೀರೇಂದ್ರಪಾಟೀಲ್.—ಕೆಲಸ ಮಾಡಿಸಿ ಕೊಂಡು ಕಂಟ್ರಾಕ್ಟುದಾರರಿಗೆ ದುಡ್ಡು ಕೊಡದೆ ಇರುವುದಕ್ಕೆ ಆಗುವುದಿಲ್ಲ. ಏಕೆಂದರೆ ಆರೀತಿ ಕೊಡದೇ ಇದ್ದರೆ ಅವರು ಕೋರ್ಟಿಗೆ ಹೋಗಿ ನಮ್ಮಮೇಲೆ ಕೇಸ್ ಹಾಕಬಹುದು ನಮ್ಮಲ್ಲಿ ಎಷ್ಟು ದುಡ್ಡು ಇರುತ್ತದೋ ಅದನ್ನು ಚೀಫ್ ಇಂಜಿನಿಯರ್ ಅಡಿಷನಲ್ ಅರಾಟ್‌ಮೆಂಟ್ ಕೇಳಿದ್ದಾಗ್ಗೆ ಕೊಡುವಾಗ ಸ್ವಲ್ಪ ನಿಧಾನವಾಗಬಹುದು.

Sri G. V. GOWDA.— May I know whether the authorities have issued any notice to contractors in respect of works which have not been executed according to the specifications ?

Sri VEERENDRA PATIL.—Yes. In certain cases they have issued instructions and in certain cases they have issued notices to contractors to complete the work according to specifications.

ಶ್ರೀ ಟಿ. ಮಾದಯ್ಯಗೌಡ.—ಕೆಲವು ಕಂಟ್ರಾಕ್ಟರು ಗಳಿಗೆ 10-15 ಕೆಲಸಗಳನ್ನು ಕೊಡುವುದರಿಂದ ಅವರು ಸಕಾಲದಲ್ಲಿ ಕೆಲಸಮಾಡದೆ ಬಿಲ್‌ಪ್ರಕಾರ ದುಡ್ಡನ್ನು ಮಾತ್ರ ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರಪಾಟೀಲ್.— ಆ ತರಹದಲ್ಲೂ ಕೆಲವು ಬರುತ್ತವೆ. ಆದರೆ ಎಲ್ಲಾ ಆ ರೀತಿಯಾಗಿಯೇ ಬರುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಂತಹ ಬಿಲ್ಲು ಗಳಿಗೂ ಸರ್ಕಾರದವರು ದುಡ್ಡು ಕೊಡುವ ಪದ್ಧತಿ ಇದೆಯೇ ?

Mr. SPEAKER.—All these are too vague supplementaries. I want the Hon'ble Members to ask for specific information.

Sri K. P. GADAG.—I put Question No. 205.

Mr. SPEAKER.—The Hon'ble Minister has requested me that he would come a little late. The question may be taken up after he comes.

Providing of Residential Quarters for Talathies in North Kanara District.

*Q—631. S. P. PHAYADE (Ankola).—Will the Government be pleased to state :—

(*a*) whether they are aware that there are no residential quarters for Talathies in North Kanara District ;

(*b*) the steps they have taken to provide quarters to them ?

A.—Sri M. V. KRISHNAPPA (Minister for Revenue).

(*a*) Yes.

(*b*) Government have not taken up any programme for providing residential accommodation to Village Officers.

ಶ್ರೀ ಎಸ್. ಪಿ. ಪಾಯಡೆ.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ Government have not taken up any programme for providing residential accommodation to Village Officers ಎಂದು ಹೇಳಿದೆ. ಈಗ ತಳವಾರರಿಗೆ ಗ್ರಾಮಗಳಲ್ಲಿ ಇರಲಿಕ್ಕೆ ವಾಸದ ಮನೆಗಳು ಸಿಕ್ಕದೆ